ಮಾತಾಡಿಸಿದ್ದು? ಕೇಳಿದ ಮೇಲೆ ಹೀಗೆಲ್ಲಾ ಕೇಳಬಾರದಿತ್ತು ಅನಿಸಿಯೇ ಅನಿಸಿತು ಭಟ್ಟರಿಗೆ. ಯಾಕೋ ಸೀತೆ ಸ್ವಲ್ಪ ಹೊತ್ತು ಮಾತಾಡಲಿಲ್ಲ. ನಂತರ ನಿಧಾನಕ್ಕೆ ಹೇಳಿದಳು,

"ಮಗು ಸ್ಕೂಲಿಗೆ ಹೋಗುವಷ್ಟು ದೊಡ್ಡೋನಾಗ್ಲಿ. ಆಮೇಲೆ ಇಲ್ಲೇ ಬಂದು ಇದ್ಬಿಡ್ತೀನಿ ಅಣ್ಣ..."

ತಾವು ಕೇಳಿದ್ದು ಏನೋ, ಅವಳು ಹೇಳಿದ್ದು ಏನೋ. ಆದರೂ ಅವಳು ಹೇಳಿದ್ದರಲ್ಲಿ ತಮ್ಮ ಪ್ರಶ್ನೆಗೆ ಉತ್ತರ ಕಂಡುಕೊಳ್ಳದೆ ಇರಲಿಲ್ಲ ಭಟ್ಟರು.

"ನಾನೇನು ಶಾಶ್ವತ ಅಂದ್ಕೊಂಡಿದೀಯಾ?" ಸಣ್ಣದೊಂದು ನಗೆ.

"ನೀನೂ ಅಲ್ಲ, ನಾನೂ ಅಲ್ಲ" ಅಂದಳು ಸೀತೆ.

"ಹಾಸಿಗೆ ಹಿಡಿದು ನಬೆಯೋ ಕಾಲ ಬರದೆ ಸುಸೂತ್ರವಾಗಿ ಕೈ ಬೀಸ್ಕೊಂಡು ಹೊರಟುಬಿಟ್ರೆ ಸಾಕು ಮಾರಾಯ್ತೀ. ಹಣೇಲಿ ಏನು ಬರೆದಿದ್ಯೋ?"

"ಸುಮ್ನಿರು, ಸಾಯೋ ಮಾತು ಯಾಕೆ ಆಡ್ತಿ?" ಅಂದಳು ಒದ್ದೆ ದನಿಯಲ್ಲಿ ಸೀತೆ.

*****

ಶೀನಪ್ಪಯ್ಯ ಸತ್ತ ಹತ್ತನೇ ದಿನ. ಧರ್ಮೋದಕಕ್ಕೆ ಹೋಗಿ ಗೆಳೆಯನ ಋಣ ತೀರಿಸಿ ಬಂದರು ಭಟ್ಟರು. 'ಸತ್ತ ಮನೆ' ಅನ್ನುವ ಯಾವ ಕುರುಹೂ ಕಾಣದೆ ಗಲಗಲ ಅನ್ನುತ್ತಿದ್ದ ಮನೆ ನೋಡಿ ಅವರಿಗೆ ಆಶ್ಚರ್ಯಕ್ಕಿಂತಾ ಹೆಚ್ಚಾಗಿ ವಿಷಾದವಾಗಿದ್ದು ಹೌದು. ಅಷ್ಟು ವರ್ಷ ತಮ್ಮ ಜೊತೆ ಬಾಳಿ ಬದುಕಿದ ಜೀವ ಶಾಶ್ವತವಾಗಿ ಅಗಲಿ ಹೋದರೆ ಆ ಕುರಿತು ತಿಲಮಾತ್ರವಾದರೂ ಅರಕೆ ಕಾಡುವುದಿಲ್ಲವಾ? ಮನುಷ್ಯಜನ್ಮ ಅಂದರೆ ಇಷ್ಟು ಕ್ಷುಲ್ಲಕವಾದದ್ದಾ? ಸಾಯಬಾರದ ವಯಸ್ಸಲ್ಲಿ ಸತ್ತರೆ ಮಾತ್ರಾ ಅಗಲಿಕೆಯ ದುಃಖ ಕಾಡುವುದಾ?

"ಪುಣ್ಯಾತ್ಮ, ಯಾರಿಗೂ ತಾಪತ್ರಯ ಕೊಡದೆ ಸಲೀಸಾಗಿ ಪೆಟ್ಟಿಗೆ ಕಟ್ಟಿದ" ಯಾರೋ, ಯಾರಿಗೋ ಹೇಳುತ್ತಿದ್ದುದು ಶಬ್ದಮಾತ್ರವಾಗಿ ಭಟ್ಟರ ಕಿವಿಗಳ ಮೇಲೆ ಬಿದ್ದಿತ್ತು. 'ದಯಾಮರಣ'ದ ಪರ, ವಿರೋಧಗಳ ಕುರಿತು ಆಗೀಗ ಪೇಪರುಗಳಲ್ಲಿ, ಟೀವಿಯಲ್ಲಿ, ಬಿಸಿಯೇರುತ್ತಿದ್ದ ಚರ್ಚೆ ನೆನಪಾಗಿತ್ತು. 'ದಯಾಮರಣ' ಕಾನೂನುಬದ್ಧವಾದರೆ ದುರುಪಯೋಗವಾದೀತೆಂಬ ವಾದ ನೆನೆದು ಭಟ್ಟರ ತುಟಿಗಳೆಡೆಯಲ್ಲಿ ಸುಳಿದಾಡಿತ್ತು ವ್ಯಂಗ್ಯ ನಗೆ. ಶೀನಪ್ಪಯ್ಯನ ವಿಷಯದಲ್ಲಿ ನಡೆದದ್ದೇನು? ನಿರ್ದಯಾಮರಣ ಅನ್ನಬಹುದೇ? ಸೂಕ್ತ ಚಿಕಿತ್ಸೆ, ಕಾಳಜಿ, ದೇಖರೇಖಿ ಇಲ್ಲದೆ ಅವಜ್ಞೆಗೀಡಾದ ಎಷ್ಟು ಜನ ಮುದುಕರು ಹೀಗೆ ಇಹಲೋಕಕ್ಕೆ ವಿದಾಯ ಹೇಳುತ್ತಾರೋ ಯಾರಿಗೆ ಗೊತ್ತಿದೆ? ಹೀಗೆಂದುಕೊಳ್ಳುವುದು ಸಿನಿಕತನವಾದರೂ ಸತ್ಯವೂ ಇರಬಹುದು ಅನಿಸಿತ್ತು ಭಟ್ಟರಿಗೆ.

*****

ಸೀತೆ ಮಗನ ಮನೆಗೆ ಹೊರಟು ಹೋಗಿ ಯಥಾಪ್ರಕಾರ ಭಟ್ಟರು ಒಬ್ಬಂಟಿ. ಹೀಗೇ ಒಂದು ಮುಸ್ಸಂಜೆ ಹೊತ್ತಲ್ಲಿ ಅಂಗಡಿಗೆ ಹೋಗಿ ಬರುತ್ತಿದ್ದಾಗ ಹಾದಿಯಲ್ಲಿ ಪರಿಚಿತರೊಬ್ಬರು ಸಿಕ್ಕಿ ಅಡ್ಡ ಹಾಕಿದರು. ಅಲ್ಲಿ ಇಲ್ಲಿ ಸುಳಿದ ಮಾತು ಶೀನಪ್ಪಯ್ಯನವರೆಗೆ ಬಂತು.

"ನಿಮ್ಮ ಗೆಳೆಯ ಸುಸೂತ್ರವಾಗಿ ವೈಕುಂಠಕ್ಕೆ ಹೋಗಿ ತಲುಪಿಕೊಂಡ್ರಂತಾ? ಕಾಗದ ಗೀಗದ ಬಂದಿತ್ತಾ?" ಎದುರಿನವರು ಹಾಸ್ಯವಾಗಿ ಭಟ್ಟರನ್ನು ಕೆಣಕಿದರು.

ಅವರ ತಮಾಷಿ ಮಾತಿಗೆ ಸದಾಶಿವಭಟ್ಟರು ಕೊಟ್ಟಿದ್ದೂ ಕುಶಾಲಿನ ಉತ್ತರ,